ಕಲ್ಪನೆ ಕಾವ್ಯ



## ವ್ರಣಗಳ ಮಗ್ಗಿ

ಹಸಿವಿನ ಹಾಹಾಕಾರ
ಏನ ಮಾಡಿಸಿತ್ತು ತಂಗಿ...
ಬೇಡಿಸಿತ್ತು, ಕಾಡಿಸಿತ್ತು,
ಒಡಲ ನಗ್ನವಾಗಿಸಿತ್ತು!
ಬಟ್ಟಲು ಕಣ್ಣ ನೀರ ಇಂಗಿಸಿ
ಲಜ್ಜೆಯ ಕಳೆದು,
ಬಿಗಿದ ಮುಷ್ಟಿಯೊಳಗೆ
ರೊಕ್ಕ ಹಿಡಿದ
ಹದ್ದುಗಳ ಕೂಡಿ,
ಹಸಿವ ಭಾಗಿಸಿ,
ನೋವ ಗುಣಿಸಿತ್ತು
ಹಸಿವಿನ ಹಾಹಾಕಾರ ತಂಗಿ!
ರೊಕ್ಕವಿಲ್ಲದ ತೆರೆದ ಕೈಯ
ಕುಕ್ಕಿ ಹರಿದು ಹಾರಿದ ಹದ್ದು,
ಬೆತ್ತಲಾಗಿ ನಿಂತ ತನು
ಇರಿವ ಕಣ್ನೋಟಗಳಿಗೆ ಕುರುಡಾಗಿ
ಅಣು ಅಣುವ ಕಿತ್ತು ತಿನ್ನುವ
ಈ ವ್ರಣಗಳ ಮಗ್ಗಿ
ಸರಿಯಲ್ಲ,
ಬದುಕಿನ ಉಳಿದ ದಿನಗಳ ಲೆಕ್ಕ
ತಪ್ಪಿಸುತ್ತಿದೆಯಲ್ಲೇ ಈ
ಹಸಿವಿನ ಹಾಹಾಕಾರ ತಂಗಿ!

**ವಸುಧಾ ಮೂರ್ತಿ**

## ಇನ್ನೆಲ್ಲಿಗೆ?

ಚಿಗರೆಯು ಎಗರಿ ಕೇಳುತಿದೆ
ನನ್ನಂತೆ ನೀನೂ
ಅರಿವೆಯ ಹಂಗಿಲ್ಲ.
ಅರಿಯದ ದಾರಿಯಿಲ್ಲ
ಅತ್ತಣಿಂದಿತ್ತ
ಇತ್ತಣಿಂದತ್ತ
ಹಾರಿ ಹಾರಿ ಓಡೋಣ ಬಾ,
ನಿಂತಲ್ಲೆ ನಿಲಬೇಡ ಬೇರ ಬಿಟ್ಟು
ಈ ಕಾನನದ ಗಿಡ ಮರಗಳಂತೆ,
ಎತ್ತಲು ಪಯಣ ಎನಬೇಡ
ಅತ್ತಣಿಂದಿತ್ತ
ಇತ್ತಣಿಂದತ್ತ
ಕುಣಿಕುಣಿದು ಜಿಗಿಯೋಣ ಬಾ.
ತಕ್ಷಣದ ತರಲೆಗಳ ಮರೆತು
ತಮವ ತೊರೆದು ಬೆಳಕಿನತ್ತ
ಆಡುತ್ತಾಡುತ್ತಾ ನಡೆಯೋಣ ಬಾ

**ಅಪರ್ಣ ಸರಳಾಯ**